ಅವರ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಅದನ್ನು ದೇವರು ಮೆಚ್ಚಲ್ಲ' ಅಂತ ಟಿವಿಎಸ್ ರಾಮಣ್ಣ ಹಲವರ ಬಳಿ ಹೇಳಿದರೂ ಅಪಪ್ರಚಾರ ನಿಲ್ಲಲಿಲ್ಲ! ವಿಶ್ವನಾಥನನ್ನು ಮನೆಗೆ ಕರೆಸಿಕೊಂಡು ಇಮಾಂ ಸಾಬರ ಬಗ್ಗೆ ಸುಳ್ಳು ಪ್ರಚಾರ ಮಾಡುವುದನ್ನು ನಿಲ್ಲಿಸುವಂತೆ ನಿನ್ನ ತಮ್ಮಂದಿರಿಗೆ ಹೇಳು ಅಂತಲೂ ಎಚ್ಚರಿಸಿದರು. ಆದರೂ ಅಪಪ್ರಚಾರ ನಿಲ್ಲಲಿಲ್ಲ.

ಪ್ರೆಸಿಡೆಂಟರೂ ಸೇರಿದಂತೆ ಐದಾರು ಮುಖಂಡರ ಮನೆಗೆ ಹೋದ ಮೊದೀನ್, 'ತನ್ನಲ್ಲಿರುವ ಜಮೀನಿನ ದಾಖಲೆಗಳನ್ನು ನಿಮಗೆ ತೋರಿಸುತ್ತೇನೆ. ಅಪ್ಪ ಗೋಮಾಳದ ಜಮೀನು ಕಬ್ಜ ಮಾಡಿದ್ದಾರೆ ಅಂತ ಅಪಪ್ರಚಾರ ಮಾಡೋರನ್ನು ಕರೆದು ಬುದ್ಧಿಹೇಳಿ' ಅಂತ ವಿನಂತಿ ಮಾಡಿಕೊಂಡ.

'ಇಮಾಂ ಸಾಬರ ಬಗ್ಗೆ ನಮಗೆ ಚೆನ್ನಾಗಿ ಗೊತ್ತಪ್ಪ... ಈಗಿನ ಹುಡುಗರಿಗೆ ಗೊತ್ತಿಲ್ಲ. ಅವರನ್ನು ಯಾರೋ ಎತ್ತಿ ಕಟ್ಟಿ ತಮಾಷೆ ನೋಡ್ತಿದ್ದಾರೆ. ಊರನ್ನು ಒಡೀಬೇಕು ಅಂತ ರಾಜಕೀಯದವರು ಮಾಡಿರೋ ಪ್ಲಾನು. ನೀನು ಹೆದರಬೇಡ. ಅವರು ನಿನ್ನ ತಂಟೆಗೆ ಬರಲ್ಲ. ನೀನು ಸುಮ್ಮನಿರು. ನಿನ್ನತ್ರ

